


ಎಡದಿಂದ ಬಲಕ್ಕೆ:

1. ಕಳ್ಳನೆಂಬ ಶಂಕೆ ಬೇಡ. ನಿಜವಾಗಿ ಆತ ದೋಷರಹಿತ (4)
3. ಒರಸುವ ಮುನ್ನ ಸ್ವಲ್ಪ ನೇವರಿಸು (3)
4. ಶಂಕರನ ಶಿರದಲ್ಲಿ ಅದೇನು ಆಭರಣ? (3)
6. ನೀರಿಗೆಲ್ಲಿದೆ ಆಕಾರ? ದೇವರದೂ ಅದೊಂದು ಗುಣ ಹೌದೇ? (4)
7. ಸುಲಭವಲ್ಲದ್ದರ ಜೊತೆಗೇ ಹಿತಕರವಾದದ್ದೂ ಸೇರಿದರೆ? (4)
9. ಕವಿಯ ಮಾತು ಆಲಿಸುವ ಮೊದಲು ಅದೆಂಥ ಕಸರತ್ತು? (4)
12. ಅವನು ಹಾಡಿದ ರಾಗದ ಪರಿಣಾಮ ಈ ಪ್ರೀತಿ (4)
14. ಸುಭದ್ರೆಯ ಮಗ ಮಹಾ ಸುಂದರ (3)
15. ಪತಿಯಂತೆ ನಟಿಸ ಹೋಗಿ ನೀಚ ವ್ಯಕ್ತಿಯಾದ (3)
16. ಮತಿಹೀನರ ಪ್ರಕಾರ ಅವನು ಭೂಮಿಗೇ ಅರಸ! (4)

ಮೇಲಿಂದ ಕೆಳಕ್ಕೆ:

1. ನಾರು ತರುವುದು ಅಸಾಧ್ಯ ಏಕೆಂದು ಕೇಳಿದರೆ ಪ್ರತಿಮಾತಿಲ್ಲ (4)
2. ಕರ್ಕಶ ಕರೆ ಮಾಡಿದ್ದು 'ಬೆನ್ನೆಲುಬಿರುವ ಪ್ರಾಣಿಯೇ ಹೌದು (4)
3. ಸಾಕ್ಷರನಾಗದಿದ್ದರೆ ದೈತ್ಯನೂ ತಲೆ ಕೆಳಗು (3)
5. ಸುಮ್ಮನಿರಿಸು. ಹೇಗಾದರೂ ಸಮಾಧಾನಪಡಿಸು (3)
6. ನರ್ತಕರ ಶ್ರಮವೆಲ್ಲ ವ್ಯರ್ಥವಾಯಿತಲ್ಲ! (4)
8. ಕಡೆಗೂ ಮರೆಯಾಗಿತ್ತು, ಕತ್ತಿ ಧರಿಸಿದ ಪ್ರಾಣಿ (4)
10. ವಂಚಿಸಿದವರ ವಿವರಗಳನ್ನೆಲ್ಲ ಓದು (3)
11. ತೇರಿಗೆಂದು ಬಂದವರಿಗೆ ಸಿಕ್ಕಿದ್ದು ಸೆರೆಮನೆ (4)
12. ಅಧಃಪತನಕ್ಕೆ ಕಾರಣ ಇದೇ ಮಹಾರಾಜ (4)
13. ದರ ತಿಳಿದೊಡನೆ ಭಾರೀ ಗಲಾಟೆಯೇ ನಡೆಯಿತು (3)

### ಪದಬಂಧ 04-10-2012 ರ ಉತ್ತರಗಳು

**ಎಡದಿಂದ ಬಲಕ್ಕೆ:**

1. ಅಂಧಕಾರ; 3. ಪತಂಗ; 4. ಜರ್ಜರ; 6. ದಣಾಯಕ; 7. ಮಕರ. 9. ಕೆನೆತ; 11. ಕಹಾನಿ; 13. ತವರು; 15. ಹಸುಗೂಸು; 17. ಕಠಿಣ; 18. ಮಾರ್ಜನ; 19. ತೆಪ್ಪನಿರು.

**ಮೇಲಿಂದ ಕೆಳಕ್ಕೆ:**

1. ಅಂಗದ; 2. ರಜಕ; 3. ಪದಕ; 5. ರವಾನೆ; 7. ಮಸ್ತಕ; 8. ರಜನಿ; 9. ಕೆರೆತ; 10. ತಳಿರು; 12. ಹಾರ್ದಿಕ; 14. ವರ್ಧನ; 15. ಹಣತೆ; 16. ಸುಮಾರು.



# ಪ್ರಶ್ನಾಂಕಣ

## ಹೂಜಿ ಗಿಡ - ಅದೆಂಥ ಸಸ್ಯ?

ಹೂಜಿ ಗಿಡ. ಅದೊಂದು ಪರಮ ಸೋಜಿಗದ ಸಸ್ಯ. ಈ ಸಸ್ಯದ ಎಲೆಗಳದು ವಿಚಿತ್ರ ವಿಸ್ಮಯಕರ ಆಕಾರ; ಬಹು ವಿಭಿನ್ನ ಕಾರ್ಯತಂತ್ರ ಕೂಡ. ಇತರೆಲ್ಲ ಸಸ್ಯಗಳಂತೆ ಈ ಸಸ್ಯವೂ ದ್ಯುತಿ ಸಂಶ್ಲೇಷಣೆಯ ಮೂಲಕ ಆಹಾರ ತಯಾರಿಸಿಕೊಳ್ಳುತ್ತದೆ. ಜೊತೆಗೆ ಇತರ ಸಸ್ಯಗಳಿಂದ ಭಿನ್ನವಾಗಿ ಅದೇ ಎಲೆಗಳ ಮೂಲಕವೇ ಚಿಕ್ಕಪುಟ್ಟ ಪ್ರಾಣಿಗಳನ್ನು- ವಿಶೇಷವಾಗಿ ಕೀಟಗಳನ್ನು ಸೆರೆಹಿಡಿಯುತ್ತದೆ, ಬೇಟೆಯಾಡುತ್ತದೆ, 'ತಿಂದು ಹಾಕುತ್ತದೆ!' ಅದಕ್ಕೆ ನೆರವಾಗಲೆಂದೇ ಈ ಗಿಡದ ಎಲೆಗಳದು ಕೊಳವೆಗಳಂತೆ, ಮುಚ್ಚಳ ಸಹಿತ ಬಟ್ಟಲುಗಳಂತೆ, ಉದ್ದ ಕತ್ತಿನ ಹೂಜಿಗಳಂತೆ ನಿರ್ಮಿತಿ (ಚಿತ್ರಗಳಲ್ಲಿ ಗಮನಿಸಿ). ಈ ಕಾರಣದಿಂದ ಈ ಸಸ್ಯಕ್ಕೆ 'ಹೂಜಿ ಗಿಡ' ಎಂಬ ರೂಪಾನ್ವಯ ಹೆಸರು. ಹೂಜಿ ಗಿಡಗಳಲ್ಲಿ ಹಲವಾರು ಪ್ರಭೇದಗಳಿವೆ. ಅವು ಕೀಟಗಳ ಬೇಟೆಗಾಗಿ ಹಿಡಿದು ನಿಲ್ಲುವ 'ಹೂಜಿ'ಗಳ ಅಳತೆ-ಆಕಾರಗಳು ಪ್ರಭೇದದಿಂದ ಪ್ರಭೇದಕ್ಕೆ ಭಿನ್ನ ಭಿನ್ನ.




ಹೂಜಿ ಗಿಡಗಳ ಹೂಜಿಗಳು ಬಟ್ಟಲುಗಳು 'ಖಾಲಿ ಪಾತ್ರೆ'ಗಳಲ್ಲ. ವಾಸ್ತವ ಏನೆಂದರೆ ಈ ಪರ್ಣ ಪಾತ್ರೆಗಳ ತೆರೆದ ಬಾಯಿಯ ಅಂಚುಗಳಲ್ಲಿ ಮತ್ತು ಮುಚ್ಚಳದ ತಳದಲ್ಲಿ ಮಧುರ ರುಚಿಯ ಆಕರ್ಷಕ ವಾಸನೆಯ ಜಾರುದ್ರವ ಲೇಪನಗೊಂಡಿತ್ತದೆ. ಜೊತೆಗೆ ಹೂಜಿಯ ಒಳಗೆ ತಳದಲ್ಲಿ ಬೇರೊಂದು ವಿಶಿಷ್ಟ ದ್ರವ ಒಂದಷ್ಟು ಸಂಗ್ರಹಗೊಂಡಿರುತ್ತದೆ. ಸಿಹಿ ರಸ ಸೇವಿಸಲು ಬಂದ ಕೋಟಗಳು ಕಾಲುಜಾರಿ ಹೂಜಿಯೊಳಕ್ಕೆ ಬೀಳುತ್ತವೆ. ಆ ಅಂಟು ದ್ರವದಲ್ಲಿ ಬಂಧಿಗಳಾಗಿ ಪ್ರಾಣ ಬಿಡುತ್ತವೆ. ಹೂಜಿಯೊಳಗಿನ ದ್ರವದಲ್ಲಿನ ವಿಶೇಷ ಕಿಣ್ವಗಳು ಬಲಿಯ ಶರೀರ ವನ್ನು ಕರಗಿಸುತ್ತವೆ. ಆಗ ಲಭಿಸುವ ಪೋಷಕಾಂಶಗಳನ್ನು ಹೂಜಿ ಗಿಡ ಹೀರಿಕೊಳ್ಳುತ್ತದೆ! ಹೂಜಿಯ ಬಾಯಿಯ ಬಳಿ ಬಂದಿಳಿವ ಕೀಟಗಳನ್ನು ತಾವು ಹಿಡಿಯಲು ಹೋಗಿ ಹೂಜಿಯೊಳಕ್ಕೆ ಜಾರಿ ಬೀಳುವ ಪುಟ್ಟ ಪುಟ್ಟ ಹಲ್ಲಿ, ಕಪ್ಪೆಗಳನ್ನೂ ಜೀರ್ಣಿಸಿಕೊಳ್ಳುವ ಪ್ರಭೇದಗಳೂ ಇವೆ.

ಇಲ್ಲೊಂದು ಪ್ರಶ್ನೆ: ದ್ಯುತಿ ಸಂಶ್ಲೇಷಣೆಯಿಂದ ಆಹಾರ ತಯಾರಿಸಿದರೂ ಹೀಗೆ ಕೀಟಗಳನ್ನು ಬೇಟೆಯಾಡುವ, 'ಮಾಂಸಾಹಾರ' ಸೇವಿಸುವ ಅಗತ್ಯ ಈ ಸಸ್ಯಕ್ಕೆ ಏಕೆ?

ವಾಸ್ತವ ಏನೆಂದರೆ ಹೂಜಿ ಗಿಡಗಳಂತೆಯೇ ಇತರ ತಂತ್ರಗಳಿಂದ ಕೀಟಗಳನ್ನು ಭಕ್ಷಿಸುವ ಮತ್ತೂ ಕೆಲಸ ಸಸ್ಯಗಳಿವೆ. ಆರೇಳು ವಿಧಗಳ ಒಟ್ಟು ಸುಮಾರು 675 ಪ್ರಭೇದಗಳಿರುವ ಇವೆಲ್ಲ ಸಸ್ಯಗಳೂ ಹೂಳು ನೆಲ, ಜೌಗು ಭೂಮಿಗಳಂಥ ಪ್ರದೇಶಗಳಲ್ಲಿ ಬೆಳೆಯುತ್ತವೆ. ಇಂಥ ನೆಲೆಗಳಲ್ಲಿ ಮಣ್ಣಿನಲ್ಲಿ ಅತ್ಯವಶ್ಯ ಖನಿಜ ಪೋಷಕಾಂಶಗಳು- ಸಾರಜನಕ ಮತ್ತು ರಂಜಕ ಘಟಕಗಳು- ಅಲಭ್ಯ. ಈ ಅಂಶಗಳನ್ನು ಪಡೆಯಲೆಂದು ಈ ಸಸ್ಯಗಳು ಪ್ರಾಣಿಗಳನ್ನು ಬೇಟೆಯಾಡುತ್ತವೆ.

■ ಎನ್. ವಾಸುದೇವ್